


**ಅಪರೂಪದ ಮಾಹಿತಿ**

ಟಿವಿ ಧಾರಾವಾಹಿಗಳ ಕುರಿತ ಗುಡಿಹಳ್ಳಿ ನಾಗರಾಜ ಅವರ 'ಶೂಟಿಂಗ್ ಮನೆಗಳು' ಮುಖಪುಟ ಲೇಖನ ಅಪರೂಪದ ಮಾಹಿತಿ ನೀಡಿತು.

-ಪಿ.ಗೋವಿಂದರಾಜ್, ಎಚ್.ಎನ್.ವಿಶ್ವನಾಥ- ಶಿವಮೊಗ್ಗ/ ಜಿ.ಕೆ.ಶ್ರೀಮತಿ, ಕೋಟೆ ಸೂರ್ಯನಾರಾಯಣ ರಾವ್, ಬಿ.ಎಸ್.ರಮೇಶ್- ಬೆಂಗಳೂರು ತಂ.ರಾಮನಮಲಿ- ಹರಪನಹಳ್ಳಿ

**ಮನೆ ಬೆಂಗಳೂರಲ್ಲಿರಬೇಕಿತ್ತು!**

ಬೆಂಗಳೂರಿನಲ್ಲಿ ಅದ್ದೂರಿ ಬಂಗಲೆ ಕಟ್ಟಿಸಿದವರಿಗೆ ಧಾರಾವಾಹಿ ಚಿತ್ರೀಕರಣದಿಂದ ಒಳ್ಳೆಯ ಆದಾಯ. ನಾವು ಶಿವಮೊಗ್ಗದಲ್ಲಿ ಬಂಗಲೆ ಕಟ್ಟಿದ್ದೇವೆ. ಲೇಖನ ಓದಿದಾಗ ನಾವೂ ಬೆಂಗಳೂರಿನಲ್ಲಿರಬೇಕಿತ್ತು ಎನಿಸಿತು!

-ಸುಕನ್ಯ ಜಗದೀಶ್, ಶಿವಮೊಗ್ಗ

**ಮಮ್ಮಿ ಎಂದರೆ ಹೆಣ!**

ಬೆಂಗಳೂರಿನ ಬಸವೇಶ್ವರ ನಗರದ ನಮ್ಮ ಮನೆ ಬಳಿ ಶೂಟಿಂಗ್ ಮನೆ ಇದೆ. ಶೂಟಿಂಗ್‌ನ ದೊಡ್ಡ ಬಸ್, ನಟ- ನಟಿಯರ, ತಾಂತ್ರಿಕರ ಕಾರುಗಳು ರಸ್ತೆಯನ್ನು ಆಕ್ರಮಿಸಿಕೊಂಡು ಬೆಳಿಗ್ಗೆಯಿಂದ ಸಂಜೆವರೆಗೆ ವಾಹನ ಸಂಚಾರಕ್ಕೆ ಸಂಚಕಾರ ಉಂಟು ಮಾಡುತ್ತದೆ. ಟಿವಿ ಧಾರಾವಾಹಿಗಳು ಕನ್ನಡ ಉಳಿಸಿವೆ ಎಂಬ ಟಿಎನ್ ಸೀತಾರಾಂ ಅಭಿಪ್ರಾಯ ಶುದ್ಧಾಂಗ ತಪ್ಪು. ಹಾಗೆ ನೋಡಿದರೆ ಕನ್ನಡ ಭಾಷೆಯನ್ನು ಈ ಧಾರಾವಾಹಿಗಳು ಕುಲಗೆಡಿಸುತ್ತಲಿವೆ. 'ಅಮ್ಮ' 'ಅಪ್ಪ' 'ಅಣ್ಣ' 'ಅಕ್ಕ' ಎಂಬಿತ್ಯಾದಿ ಶಬ್ದಗಳ ಬದಲಾಗಿ ಮಮ್ಮಿ, ಡ್ಯಾಡಿ, ಡ್ಯಾಡ್, ಬ್ರೊ, ಸಿಸ್ ಶಬ್ದಗಳ ಬಳಕೆಯಿಂದಾಗಿ ಕನ್ನಡ ಶಬ್ದಗಳು ಮಾಯವಾಗುತ್ತಲಿವೆ.

ಮಮ್ಮಿ ಎಂದರೆ ಈಜಿಪ್ಟ್ ದೇಶದಲ್ಲಿ ಕೆಡದಂತೆ ಕಾಯ್ದಿರಿಸಿಕೊಂಡು ಬಂದಿರುವ ಸಾವಿರಾರು ವರ್ಷಗಳಷ್ಟು ಹಳೆಯ ಹೆಣಗಳು!

-ಡಾ.ಎಚ್.ಚಂದ್ರಶೇಖರ, ಬೆಂಗಳೂರು

**ನಾನು ಯಾರು? ಪ್ರಶ್ನೆ ಒಳ್ಳೆಯದೇ**

'ನಾನು ಯಾರು?' ಎಂಬ ಪ್ರಶ್ನೆಯು ಏಕಾಂತದಲ್ಲಿ ಒಬ್ಬನಿಗೆ ಮೂಡಿದಾಗ, ಅವನ ಜೀವನಕ್ರಮವೇ ಬದಲಾಗುವುದರಲ್ಲಿ ಸಂದೇಹವಿಲ್ಲ. ವಿಚಾರ ಲಹರಿಯ ಬರಹ ಈ ಚಿಂತನೆಗೆ ಹಚ್ಚಿತು.

-ಟಿ.ಎನ್. ಸರಸ್ವತಿ, ತಿಪಟೂರು

**ಚಲಿಸುವ ಸೇತುವೆ ಅದ್ಭುತ**

ಸೇತುವೆ ಚಲಿಸಿತು! ನಿಜಕ್ಕೂ ಅದ್ಭುತ ಎನಿಸಿತು.

-ನೆ.ಲ.ರಾಂ., ಬೆಂಗಳೂರು

**ಸ್ತ್ರೀ ರೋಗದ ಸಮಗ್ರ ಮಾಹಿತಿ**

ಡಾ. ಬಿ. ರಮೇಶ್ ಅವರು ಇಂದಿನ ಮಹಿಳೆಯರಲ್ಲಿ ಕಾಡುತ್ತಿರುವ ಸ್ತ್ರೀ ರೋಗದ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದಾರೆ.

-ಪಿ.ಎನ್. ಶ್ರೀವತ್ಸ, ಬೆಂಗಳೂರು

**ಪಕ್ಷಿಕುಲ ಕ್ಷೀಣ: ವಿಷಾದ**

ರಾಜೇಶ್ ಶ್ರೀವನ ಬರೆದ 'ಎಲ್ಲಿಗೆ ಹೋದೆಯೋ ಗುಬ್ಬಕ್ಕ?' ಓದಿ ನಿಜಕ್ಕೂ ಅಚ್ಚರಿಯಾಯಿತು. ವರ್ಷದಿಂದ ವರ್ಷಕ್ಕೆ ಪಕ್ಷಿ ಸಂಕುಲ ಕಡಿಮೆ ಆಗುತ್ತಿರುವುದು ವಿಷಾದಕರ ಸಂಗತಿ.

-ಕಾಳೀಹುಂಡಿ ಶಿವಕುಮಾರ್, ಮೈಸೂರು

**ವರ್ಷದ ವಿಶೇಷ**

ಈ ವರ್ಷ ಬರುವ ವಿಶೇಷ ದಿನಾಂಕಗಳು 1-1-11, 11-1-11, 1-11-11ಮತ್ತು 11-11-11. ಈ ವರ್ಷದ ಇನ್ನೊಂದು ವಿಶೇಷವೆಂದರೆ ನೀವು ಹುಟ್ಟಿದ ವರ್ಷದ ಕೊನೆಯ ಎರಡು ಸಂಖ್ಯೆಗಳನ್ನು ತೆಗೆದುಕೊಂಡು ಅದಕ್ಕೆ ನಿಮ್ಮ ವಯಸ್ಸನ್ನು ಕೂಡಿಸಿ ನೋಡಿ, ನಿಮ್ಮ ಉತ್ತರ 111 ಬರುತ್ತದೆ!

823 ವರ್ಷಕ್ಕೊಮ್ಮೆ ಮಾತ್ರ ಜರುಗುವ ಜಾದುವೊಂದು ಈ ವರ್ಷದ ಅಕ್ಟೋಬರ್‌ನಲ್ಲಿ ನಡೆಯಲಿದೆ. ಅದು ಏನೆಂದರೆ 5 ಶನಿವಾರಗಳು, 5 ಭಾನುವಾರಗಳು, 5 ಸೋಮವಾರಗಳು- ಈ ತಿಂಗಳಲ್ಲಿ ಬರುತ್ತವೆ.

-ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

**'ಸುಧಾ' ಹೊಸ ಓದುಗರಿಗೆ ಸ್ವಾಗತ**

'ಸುಧಾ' ಓದುಗರ ಸಂಖ್ಯೆ 3 ತಿಂಗಳಲ್ಲಿ 80,000 ದಷ್ಟು ಹೆಚ್ಚಾಗಿ ಈಗ ಅದು 4.40 ಲಕ್ಷಕ್ಕೆ ತಲುಪಿರುವ ಸಂಗತಿ ಕೇಳಿ ಬಹಳ ಸಂತೋಷವಾಯಿತು. 'ಸುಧಾ'ದ ಆರಂಭಿಕ ಓದುಗನಾಗಿ ನಾನು ಹೊಸ ಓದುಗರಿಗೆ ಸ್ವಾಗತ ಬಯಸುತ್ತೇನೆ.

-ಪಿ.ವಿ. ಸುಧೀಂದ್ರ, ಬೆಂಗಳೂರು

**ಸಮೃದ್ಧ ಹೂರಣದ ವಿಶೇಷಾಂಕ**

ಸಮೃದ್ಧ ಹೂರಣವನ್ನು ಹೊತ್ತು ತಂದ 'ಸುಧಾ' ಯುಗಾದಿ ವಿಶೇಷಾಂಕ ಸಮಗ್ರವಾಗಿ ಓದಿಸಿ ಕೊಂಡಿತು. ಪ್ರಬಂಧ, ಲೇಖನ, ಓದುಗರ ವೇದಿಕೆ ಮನಸೂರೆಗೊಂಡವು.

-ರಾಜಶೇಖರ ಗೌಡ, ಕೊಟ್ಟೂರು

**ಪರಭಾಷೆ ಮೃಷ್ಟಾನ್ನವಲ್ಲ**

ಕನ್ನಡ ಚಿತ್ರರಂಗದ 'ಗೀತ- ಸಂಗೀತ' ಕ್ಷೇತ್ರಗಳಲ್ಲಿ ಸಿದ್ಧಹಸ್ತರಾಗಿರುವ ಕೆ.ಕಲ್ಯಾಣ್ ಹಾಗೂ ವಿ. ಮನೋಹರ್ ಅವರು ಸಿನಿಮಾ ಸಂಗೀತ ಕ್ಷೇತ್ರದಲ್ಲಿನ ಪ್ರಸ್ತುತ ಸ್ಥಿತಿಗತಿಗಳನ್ನು ಓದುಗರೊಂದಿಗೆ ಮುಕ್ತವಾಗಿ ಹಂಚಿಕೊಂಡಿದ್ದಾರೆ. ಪರಭಾಷೆಯ ಹಳಸಲು ಸರಕನ್ನೇ 'ಮೃಷ್ಟಾನ್ನ'ವೆಂದು ಬಗೆಯುವ ಸಿನಿಮಾ ಪ್ರಭೃತಿಗಳು ಒಮ್ಮೆ ಇವರ ವಿಚಾರಗಳತ್ತ ಕಣ್ಣು ತೆರೆದು ನೋಡಲಿ.

-ರಾಮಚಂದ್ರ ಪೈ, ಮೂಡುಬಿದಿರೆ

**ಸಂಗ್ರಹ ಯೋಗ್ಯ ಸಂಚಿಕೆ**




ಯುಗಾದಿ ವಿಶೇಷಾಂಕ ಸಂಗ್ರಹ ಯೋಗ್ಯ ಸಂಚಿಕೆಯಾಗಿದೆ. ಬಹಳಷ್ಟು ಬರಹಗಳು ಖುಷಿ ಕೊಟ್ಟವು. ಪ್ರಬಂಧ ಸ್ಪರ್ಧೆಯ ವಿದ್ಯಾರ್ಥಿ ವಿಭಾಗದಲ್ಲಿ 3ನೇ ಬಹುಮಾನಕ್ಕೆ ಆಯ್ಕೆ ಮಾಡಿದ ಪ್ರಬಂಧ ಮೊದಲ ಬಹುಮಾನಕ್ಕೆ ಅರ್ಹವಾಗಿತ್ತು ಎಂಬುದು ನನ್ನ ಅನಿಸಿಕೆ. ಒಟ್ಟಾರೆ ವಿಶೇಷಾಂಕ ಮತ್ತೆ ಮತ್ತೆ ಓದಿಸಿಕೊಳ್ಳುವಂತಿದೆ.

ಎಂ.ಮಲ್ಲಯ್ಯ, ಶ್ರೀರಾಂಪುರ




ಬಿಳಿ ಮಚ್ಚೆಗಳೆ

ಪರಿಣಿತಿಯನ್ನು 50,000 ರೋಗಿಗಳು ಮೆಚ್ಚಿದ್ದಾರೆ.

ಹೊಸದಾಗಿ ಕಂಡುಹಿಡಿಯಲಾದ ಈ ಔಷಧಿಯನ್ನು ಉಪಯೋಗಿಸುವುದರಿಂದ ನಿಮ್ಮ ತ್ವಚೆಯ ವರ್ಣವು ಅಲ್ಪಕಾಲದಲ್ಲೇ ನೈಜವಾಗಿ ಬದಲಾಗುವುದು. ನಿಮ್ಮ ಕಾಯಿಲೆಯ ವಿವರಗಳನ್ನು ಕಳುಹಿಸಿರಿ ಅಥವಾ ದೂರವಾಣಿ ಮೂಲಕ ಮುಖ್ಯ ವೈದ್ಯಜಿಯನ್ನು ಸಂಪರ್ಕಿಸಿ.



ಲೈಂಗಿಕ ಸಮಸ್ಯೆ

ಖಂಡಿತ ಗುಣವಾಗುವುದು

ನಪುಂಸಕತೆ, ಗೊನೊರಿಯ, ಸಿಫಿಲಿಸ್, ಬಂಜೆತನ ಹಾಗೂ ಇತರೆ ಗೋಪ್ಯ ಲೈಂಗಿಕ ಸಮಸ್ಯೆಗಳನ್ನು ಆಯುರ್ವೇದಿಕ್ ಚಿಕಿತ್ಸೆ ಮೂಲಕ ಗುಣಪಡಿಸಬಹುದು. ಒಂದು ಕೋರ್ಸ್ ಔಷಧಿ ಹಾಗೂ ಉಚಿತ ಲಿಂಗವರ್ಧಕ್‌ಗೆ ನಮ್ಮನ್ನು ಸಂಪರ್ಕಿಸಲು ಸಂಕೋಚಪಡದಿರಿ.

ಸ್ತ್ರೀ ರೋಗ

ಬಿಳಿಸೆರಗು- ಬಿಳಿ ಅಥವಾ ರಕ್ತ, ಮುಟ್ಟಿನ ತೊಂದರೆ, ಬಂಜೆತನ, ರಕ್ತಹೀನತೆ ಅಶಕ್ತತೆ, ಸೊಂಟದ ನೋವು ಇತ್ಯಾದಿಗೆ ಖಾತರಿಯಾದ ಚಿಕಿತ್ಸೆಗಾಗಿ ಕೂಡಲೆ ನಮ್ಮನ್ನು ಸಂಪರ್ಕಿಸಿ.

ಆಕರ್ಷಕ ಸ್ತನಗಳಿಗೆ



ನಮ್ಮ ಯಶಸ್ವಿ ಆಯುರ್ವೇದಿಕ್ ಚಿಕಿತ್ಸೆ ಪಡೆದು ಅಲ್ಪಕಾಲದಲ್ಲೇ ನಿಮ್ಮ ಸ್ತನಗಳು ಸೂಕ್ತ ವೃದ್ಧಿ ಹೊಂದಲು ನಮ್ಮನ್ನು ಮುಕ್ತವಾಗಿ ಸಂಪರ್ಕಿಸಿರಿ.

Asia Ayurved P.O. Katri Sarai (Gaya)

Phone: 0631-2224881

09934068051 / 09386023246

09934066680